ಫ್ಯಾಷನ್

# ಚಾಕೊಲೇಟ್ ಉಡುಪು!





ಅಮೆರಿಕಾದವರು ಮಾಡಿದ್ದನ್ನು ಚೀನಾದವರು ಅನುಸರಿಸುವುದು ಕಡಿಮೆ. ಆದರೆ ಚಾಕೊಲೇಟ್ ಉಡುಪುಗಳ ವಿಷಯದಲ್ಲಿ ಹಾಗಿಲ್ಲ. ಅಮೆರಿಕಾದ ನ್ಯೂಯಾರ್ಕ್‌ನಲ್ಲಿ, ಜಪಾನಿನ ಟೋಕಿಯೋದಲ್ಲಿ, ರಷ್ಯಾದ ಮಾಸ್ಕೋದಲ್ಲಿ ಈವರೆಗೆ ನಡೆಯುತ್ತಿದ್ದ ಚಾಕೊಲೇಟ್ ಉಡುಪುಗಳ ಫ್ಯಾಷನನ್ನು ಚೀನಾದವರೂ ಈಗ ಅನುಸರಿಸಿದ್ದಾರೆ. ಶಾಂಘೈನಲ್ಲಿ ಇತ್ತೀಚೆಗೆ ನಡೆದ ಚಾಕೊಲೇಟ್ ಉಡುಪುಗಳ ಫ್ಯಾಷನ್ ಪ್ರದರ್ಶನದ ಚಿತ್ರಗಳು ಇಲ್ಲಿವೆ.

ಪ್ರದರ್ಶನದಲ್ಲಿ ಎಲ್ಲರ ಗಮನ ಸೆಳೆದದ್ದು ಚಾಕೊಲೇಟ್ ಬ್ರಾ! ಈ ರೂಪದರ್ಶಿ ವೇದಿಕೆ ಏರಿದೊಡನೆ ಎಲ್ಲರೂ 'ರ'ಕಾರದ ಒತ್ತು ಬಿಟ್ಟು 'ಬಾ.. ಬಾ..' ಎಂದ ಬಗ್ಗೆ ವರದಿಯಾಗಿಲ್ಲ.

ಚೀನಾದ ಪ್ರಸಿದ್ಧ ಬಾಣಸಿಗರು ಮತ್ತು ಫ್ಯಾಷನ್ ಡಿಸೈನರುಗಳು ಒಟ್ಟಿಗೇ ಸೇರಿ ಈ ಚಾಕೊಲೇಟ್ ಉಡುಪುಗಳನ್ನು ತಯಾರಿಸಿದರಂತೆ. ಅತೀ ಹೆಚ್ಚು ಶಾಖದಲ್ಲೂ ಕರಗದಂತೆ ಚಾಕೊಲೇಟ್ ಪಾಕವನ್ನು ಅವರು ತಯಾರಿಸಿದ್ದು, ಪ್ರದರ್ಶನ ನೋಡಲು ಬಂದವರಿಗೆ ಆ ವಿಷಯ ಗೊತ್ತೇ ಆಗದಂತೆ ಗೌಪ್ಯವಾಗಿ ಇರಿಸಿದ್ದರಂತೆ. ಬಹಳಷ್ಟು ಪ್ರೇಕ್ಷಕರು ಚಾಕೊಲೇಟ್ ಕರಗಿ ನೀರಾಗಬಹುದೆಂದು ಪ್ರದರ್ಶನದ ಕೊನೆಯವರೆಗೂ ಕಾದು ಕುಳಿತಿದ್ದರಂತೆ!

ಕೆಲವು ರೂಪದರ್ಶಿಗಳು ಒಳಗೆ ತೆಳ್ಳನೆಯ ಬಟ್ಟೆ ಧರಿಸಿದ್ದರೆ, ಇನ್ನು ಕೆಲವರು ಬಟ್ಟೆಯ ಹಂಗೇ ಇಲ್ಲದಂತೆ ಬರೀ ಚಾಕೊಲೇಟ್ ಉಡುಪುಗಳನ್ನೇ ಧರಿಸಿದ್ದರು! ಚಾಕೊಲೇಟ್‌ನಿಂದ ವಿಭಿನ್ನ ಪರಿಮಳವೂ ಹೊರ ಸೂಸುತ್ತಿತ್ತಂತೆ.

■ ವಸಂತ ಮೂಲವಿ

